# ಚಂದನವನದ ಮಿಂಚುಬಳ್ಳಿಗೆ ಉಂಗುರ ತೊಡಿಸಿದ ಕೊಡಗಿನ ಹುಡುಗ

ದಾವಣಗೆರೆಯ ಹೋಳಿಗೆಯಂಥ ಹುಡುಗಿ ಅದಿತಿ ಪ್ರಭುದೇವ, ಕೊಡಗಿನ ಹುಡುಗನ ಜೊತೆಗೆ ಮನಸ್ಸು ಬದಲಾಯಿಸಿಕೊಂಡಿದ್ದಾರೆ!

ಸದ್ಯಕ್ಕೆ ಚಂದನವನದಲ್ಲಿ ಬಹುಬೇಡಿಕೆಯ ನಟಿ ಯಾರು ಎಂದರೆ ಬೇರೆ ಬೇರೆ ಹೆಸರುಗಳು ಹಾದು ಹೋಗಬಹುದು. ಆದರೆ ಬೇಡಿಕೆಯ ಜೊತೆಗೆ ಸೂಕ್ಷ್ಮ ಸಂವೇದನೆ, ಪ್ರತಿಭೆ, ಸೌಂದರ್ಯ ಎಲ್ಲವೂ ಬೆರೆತಿರುವ ನಟಿ ಯಾರು ಎಂದರೆ ದೃಷ್ಟಿ ಅದಿತಿ ಪ್ರಭುದೇವ ಅವರ ಕಡೆಗೆ ಹಾಯುತ್ತದೆ.

ಸಿನಿಮಾ, ಹಳ್ಳಿ ಬದುಕಿನ ಕುರಿತ ಪ್ರೀತಿಯ ಕಾರಣಗಳಿಗೆ ಸುದ್ದಿಯಲ್ಲಿರುತ್ತಿದ್ದ ಅದಿತಿ ಈಗ ಬೇರೆಯದೇ ಕಾರಣಕ್ಕೆ ಸುದ್ದಿಯಲ್ಲಿದ್ದಾರೆ. ಈ ಸುದ್ದಿ ಅವರನ್ನು ಎದೆಯಲ್ಲಿಟ್ಟು ಚಳಿಗಾಲವನ್ನು ಎದುರಿಸುತ್ತಿದ್ದ ಹುಡುಗರಿಗೆ ಆಘಾತವನ್ನೂ ನೀಡಿದೆ. ಆ ಹುಡುಗರಿಗೆ ಅದು ಆಘಾತವಾಗಿರಬಹುದು, ಆದರೆ ಅದಿತಿ ಹೃದಯದ ಪಾಲಿಗಿದು ಸಿಹಿಯಾದ ಅಪಘಾತ. ಅವರ ಬೆರಳಿಗೆ ಕೊಡಗಿನ ತರುಣನೊಬ್ಬ ಉಂಗುರ ತೊಡಿಸಿದ್ದಾನೆ. ಈ ನಿಶ್ಚಿತಾರ್ಥದ ಸುದ್ದಿ ಸಿನಿಮಾದಷ್ಟೇ ವೇಗವಾಗಿ ಪ್ರಚಾರ ಪಡೆದುಕೊಂಡಿದೆ.

ಸಿನಿಮಾ ಬದುಕಿನಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು





# ತೆರೆ ಮೇಲೆ ಮತ್ತೆ ಚಿರು

ಮಳೆ ನಿಂತು ಹೋದರೂ ಮರದ ಹನಿಗಳು ನಿಲ್ಲುವುದಿಲ್ಲ ಎಂಬ ಮಾತಿದೆ. ಈ ಮರದ ಹನಿಗಳು ಮಳೆಯ ಅಗಾಧತೆಯನ್ನೂ, ಆರ್ದ್ರತೆಯನ್ನೂ ನೆನಪಿಸುತ್ತವೆ. ನಟ ಚಿರಂಜೀವಿ ಸರ್ಜಾ ಅವರ ವಿಷಯದಲ್ಲಿಯೂ ಹಾಗೆಯೇ ಆಗುತ್ತಿದೆ. ಅವರು ತೀರಿಕೊಂಡು ವರ್ಷಗಳೇ ಕಳೆದುಹೋದರೂ ತೆರೆಯ ಮೇಲೆ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಲೇ ಇದ್ದಾರೆ. ಚಿರು ನಟನೆಯ ಮತ್ತೊಂದು ಸಿನಿಮಾ 'ರಾಜಮಾರ್ತಾಂಡ' ಕೂಡ ಸದ್ಯದಲ್ಲಿಯೇ ತೆರೆಗೆ ಬರಲು ಸಜ್ಜಾಗಿದೆ. ಈಗ ಸೆನ್ಸಾರ್ ಅಂಗಳದಲ್ಲಿರುವ 'ರಾಜಮಾರ್ತಾಂಡ' ಬಹುಬೇಗನೇ ದೊಡ್ಡ ಪರದೆಯ ಮೇಲೆ ಬರಲಿದ್ದಾನೆ ಎಂಬುದು ಚಿತ್ರತಂಡದ ಹೇಳಿಕೆ.

ಚಿರು ಕೊನೆಯುಸಿರೆಳೆಯುವ ಮೊದಲೇ ಈ ಚಿತ್ರದ ಚಿತ್ರೀಕರಣವೆಲ್ಲ ಮುಗಿದಿತ್ತು. ಆದರೆ ಡಬ್ಬಿಂಗ್ ಕೆಲಸವೊಂದು ಬಾಕಿ ಇತ್ತು. ಚಿರು ಶಾರೀರದ ಕೊರತೆಯನ್ನು ಅವರ ತಮ್ಮ ಧ್ರುವ ಸರ್ಜಾ ತುಂಬಲಿದ್ದಾರಂತೆ. ಹಾಗಾಗಿ ಈ ಚಿತ್ರದಲ್ಲಿ ಚಿರು, ಧ್ರುವ ಕಂಠದಲ್ಲಿ ಮಾತನಾಡಲಿದ್ದಾರೆ! ಜೊತೆಗೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರ ಧ್ವನಿಯೂ ಈ ಚಿತ್ರದಲ್ಲಿ ಇರುವುದು ಇನ್ನೊಂದು ವಿಶೇಷ.

ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿರುವುದು ಜೆ.ಕೆ. ರಾಮನಾರಾಯಣ್. ಅವರೇ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯನ್ನೂ ಬರೆದಿದ್ದಾರೆ. ಅರ್ಜುನ್ ಜನ್ಯ ಸಂಗೀತ, ಧರ್ಮವಿಶ್ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ. ಚಿರಂಜೀವಿ ಜೊತೆಗೆ ದೀಪ್ತಿ ಸಾತಿ, ಮೇಘಶ್ರೀ, ತ್ರಿವೇಣಿ ತೆರೆಯನ್ನು ಹಂಚಿಕೊಂಡಿದ್ದಾರೆ. ಭಜರಂಗಿ ಲೋಕಿ, ಚಿಕ್ಕಣ್ಣ, ದೇವರಾಜ್ ಸೇರಿದಂತೆ ಹಲವು ನಟರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ■